ದಿನಾಂಕ 13-06-2025 ರಂದು ಸಾಕ್ಷಿಗೆ ಕ್ರಮಬದ್ಧವಾಗಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

ಪಾಟೀ ಸವಾಲು 1 ರಿಂದ 4ನೇ ಪ್ರತಿವಾದಿಗಳ ಪರ ಶ್ರೀ ಕೆ.ಎಸ್.ಪಿ., ವಕೀಲರಿಂದಃ-

ನಾನು 3ನೇ ತರಗತಿಯವರೆಗೆ ಕಲಿತಿದ್ದೇನೆ. ನನಗೆ ಕನ್ನಡ ಓದಲು, ಬರೆಯಲು ಅಷ್ಟು ಬರುವುದಿಲ್ಲ. ನನಗೆ ಇಂಗ್ಲೀಷ್ ಭಾಷೆ ಸಹ ಓದಲು ಬರೆಯಲು ಬರುವುದಿಲ್ಲ. ನನ್ನ ಗಂಡ ವಿದ್ಯಾಭ್ಯಾಸ ಮಾಡಿಲ್ಲ. ನನ್ನ ಗಂಡನಿಗೆ ಕನ್ನಡ, ಇಂಗ್ಲೀಷ್ ಭಾಷೆ ಓದಲು, ಬರೆಯಲು ಬರುವುದಿಲ್ಲ. ನನ್ನ ಮದುವೆ 1996 ರಲ್ಲಿ ಆಯಿತು. ನನ್ನ ಮದುವೆ ಹಾಲಪ್ಪನಹಳ್ಳಿ, ಕೊರಟಗೆರೆ ತಾಲ್ಲೂಕು, ತುಮಕೂರು ಜಿಲ್ಲೆಯಲ್ಲಿ ಆಯಿತು. ನನ್ನ ಮದುವೆಯ ವಿವಾನ ಆಹ್ವಾನ ಪತ್ರಿಕೆ ಅಥವಾ ಇತರೆ ದಾಖಲೆ ಹಾಜರು ಪಡಿಸಿಲ್ಲ. ನನಗೆ ಮೂರು ಜನ ಮಕ್ಕಳು. ನನ್ನ ಮಕ್ಕಳೆಲ್ಲಾ ಹುಟ್ಟಿದ್ದು ಹಾಲಪ್ಪನಹಳ್ಳಿಯಲ್ಲಿ. ನನ್ನ ಮೊದಲನೇ ಮಗನಿಗೆ 28 ವರ್ಷ, ಎರಡನೇ ಮಗಳಿಗೆ 25 ವರ್ಷ ಹಾಗೂ ಮೂರನೇ ಮಗನಿಗೆ 24 ವರ್ಷ ವಯಸ್ಸು. ನಾನು ಮದುವೆಯಾದಾಗಿನಿಂದ ಹಾಲಪ್ಪನಹಳ್ಳಿ ಕೊರಟಗೆರೆ ತಾಲ್ಲೂಕು, ತುಮಕೂರು ಜಿಲ್ಲೆಯಲ್ಲಿ ವಾಸ.

2. ನನ್ನ ಮದುವೆಗೂ ಮುಂಚೆ ನನ್ನ ಪತಿಯ ಸಂಬಂಧಿಕರ ವಿಚಾರವಾಗಿ ನನಗೆ ಯಾವುದೇ ಮಾಹಿತಿ ಇಲ್ಲ. ನನ್ನ ಮದುವೆಗೂ ಮುಂಚೆ ನನ್ನ ಪತಿಯ ಸಂಬಂಧಿಕರ ನಡುವೆ ಏನೇನು ಘಟನಾವಳಿಗಳು ಆಗಿವೆ ಎಂದು ನನಗೆ ಗೊತ್ತಿಲ್ಲ. ನನ್ನ ಪತಿಗೆ ಪಡಿತರ ಚೀಟಿ, ಚುನಾವಣಾ ಗುರುತಿನ ಚೀಟಿ, ಆಧಾರ್ ಕಾರ್ಡ್ ಹಾಲಪ್ಪನಹಳ್ಳಿ, ಕೊರಟಗೆರೆ ತಾಲ್ಲೂಕು, ತುಮಕೂರು ಜಿಲ್ಲೆಯ ವಿಳಾಸದಲ್ಲಿದೆ. ನನ್ನ

ಪತಿ ಬಿಲ್ಲಕೆಂಪನಹಳ್ಳಿಯವರು ಎಂದು ತೋರಿಸಲು ದಾಖಲೆ ಇದೆ. ಅದು ವಂಶವೃಕ್ಷ. ನನ್ನ ಪತಿಗೆ ಬಿಲ್ಲಕೆಂಪನಹಳ್ಳಿಯಲ್ಲಿ ಮತದಾರರ ಪಟ್ಟಿ ಇಲ್ಲ.

3. ದಾವೆ ಸಲ್ಲಿಸುವ ಕಾಲಕ್ಕೆ ನಿಮ್ಮ ಪತಿ ವಾದಿಯವರಿಗೆ ಕೇಸಿನ ಬಗ್ಗೆ ಮಾಹಿತಿ ಕೊಟ್ಟಿರುವ ಮಾಹಿತಿ ನಿಮಗೆ ಗೊತ್ತಿದೆಯಾ ಎಂದರೆ ಸಾಕ್ಷಿಯು ಕೇಳಿ ತಿಳಿದುಕೊಂಡಿದ್ದೇನೆ ಎಂದು ನುಡಿಯುತ್ತಾರೆ. ನಾನು 2019 ರಲ್ಲಿ ರಾಮನಗರ ನ್ಯಾಯಾಲಯಕ್ಕೆ ಪ್ರಥಮ ಬಾರಿಗೆ ಬಂದೆ. ನನ್ನ ಪತಿ ಈ ದಾವೆ ಸಲ್ಲಿಸುವ ಕಾಲಕ್ಕೆ ನಾನು ಸಹ ಇದ್ದೆ. 1 ನೇ ಪ್ರತಿವಾದಿ ಮಾಡಿರುವ ಕ್ರಮ ಮತ್ತು ದಾನಪತ್ರದ ಬಗ್ಗೆ ತಿಳಿದುಕೊಂಡಿದ್ದೀರಾ ಎಂದರೆ ಸಾಕ್ಷಿಯು ಓದಿಸಿ, ತಿಳಿದುಕೊಂಡಿದ್ದೇನೆ ಎಂದು ನುಡಿಯುತ್ತಾರೆ. ನಿಪಿ-1 ದಾಖಲೆ ಟೈಪ್ ಆಗಿರುವ ದಾಖಲೆ ಎಂದರೆ ಸರಿ. ನಿಪಿ-1 ರ ಎರಡನೇ ಪುಟದ ಒಂದನೇ ಪ್ಯಾರಾದ ಮೂರನೇ ಸಾಲಿನಲ್ಲಿ ನಾಗರಾಜು ಎಂಬ ಪದ ಕೈಬರಹದಲ್ಲಿದೆ ಎಂದರೆ ಸರಿ. ನಿಪಿ-1 ಕ್ಕೆ ನೋಟರಿ ಮಾಡಿಸಿದ್ದು ಲಾಯರ್ ಕಛೇರಿಯಲ್ಲಿ. ನಿಪಿ-1 ರ ಎರಡನೇ ಪುಟದಲ್ಲಿ ಮೂರನೇ ಸಾಲಿನಲ್ಲಿ ನಾಗರಾಜು ಎಂಬುದನ್ನು ತಿದ್ದುಪಡಿ ಮಾಡಿರುವ ಕಡೆ ನೋಟರಿಯವರು ಸಹಿ ಮಾಡಿಲ್ಲ. ನಿಪಿ-1 ಕ್ಕೆ ನಾನು ಸಹಿಯನ್ನು ರಾಮನಗರದಲ್ಲಿ ಮಾಡಿದೆ. ನಿಪಿ-1 ರ ದಿನಾಂಕದಂದು ರಾಮನಗರಕ್ಕೆ ಬಂದಿದ್ದೇವೆ ಎಂದು ಒಕ್ಕಣೆ ಇಲ್ಲ ಎಂದರೆ ಸಾಕ್ಷಿಯು ಏನು ಬರೆದಿದ್ದಾರೆ ಎಂದು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ದಿನಾಂಕ 31.01.2024 ರಂದು ಸಿ.ಪಿ.ಸಿ ಆದೇಶ 3 ನಿಯಮ 2 ರಡಿ ಸಲ್ಲಿಸಿರುವ ಅರ್ಜಿಯೊಂದಿಗೆ ಸಲ್ಲಿಸಿದ ಪ್ರಮಾಣಪತ್ರಕ್ಕೆ ಸಹಿ ಹಾಕಿರುವುದು ನಾನೇ. ಸದರಿ ಅರ್ಜಿಯ ಜೊತೆ ಸಲ್ಲಿಸಿರುವ ಪ್ರಮಾಣಪತ್ರಕ್ಕೆ ನನ್ನ ಪತಿ ಸಹಿ

ಹಾಕಿಲ್ಲ.

4. ನನ್ನ ಪತಿಗೆ ಆರೋಗ್ಯ ಸರಿಯಿಲ್ಲ ಎಂದು ತೋರಿಸಲು ದಾಖಲೆ ಹಾಜರುಪಡಿಸಿದ್ದೀರಾ ಎಂದರೆ ನೆನಪಿಲ್ಲ. ನನ್ನ ಪತಿಗೆ 3-4 ವರ್ಷಗಳಿಂದ ಕಿವಿ ಸರಿಯಾಗಿ ಕೇಳಿಸುತ್ತಿಲ್ಲ. ಮೊದಲು ಚೆನ್ನಾಗಿ ಕಿವಿ ಕೇಳಿಸುತ್ತಿತ್ತು. ಈ ಕೇಸು ಹಾಕುವ ಕಾಲಕ್ಕೆ ನನ್ನ ಪತಿಗೆ ಕಿವಿ ಸರಿಯಾಗಿ ಕೇಳಿಸುತ್ತಿತ್ತು. ನನ್ನ ಪತಿಗೆ 10-15 ವರ್ಷಗಳಿಂದ ಕಿವಿ ಕೇಳಿಸುತ್ತಿರಲಿಲ್ಲ ಎಂದರೆ ಸಾಕ್ಷಿಯು ಐದಾರು ವರ್ಷಗಳಿಂದ ಕೇಳಿಸುತ್ತಿಲ್ಲ ಎಂದು ನುಡಿಯುತ್ತಾರೆ. ನಿಪಿ-1 ರಲ್ಲಿ ಏನು ಬರೆದಿದ್ದಾರೆ ಎಂದು ಗೊತ್ತು. ಈ ದಾವೆಯನ್ನು ಏನೆಂದು ಹಾಕಿದ್ದಾರೆ ಎಂದು ನನ್ನ ಪತಿಗೆ ಗೊತ್ತೇ ಇಲ್ಲ ಎಂದರೆ ಸರಿಯಲ್ಲ. 2019 ರಲ್ಲಿ ನನ್ನ ಪತಿಗೆ ಕಿವಿ ಕೇಳಿಸುತ್ತಿರಲಿಲ್ಲ, ಆದ್ದರಿಂದಲೇ ವಾದಪತ್ರದಲ್ಲಿ ಏನು ಬರೆದಿದೆ ಎಂದು ಅವರಿಗೆ ಗೊತ್ತೇ ಇಲ್ಲ ಎಂದರೆ ಸರಿಯಲ್ಲ. ನನ್ನ ಪತಿಗೆ ಐದಾರು ವರ್ಷಗಳಿಂದ ಕಿವಿ ಕೇಳಿಸುತ್ತಿಲ್ಲ ಎಂದು ತೋರಿಸಲು ವೈದ್ಯಕೀಯ ದಾಖಲೆ ಹಾಜರು ಪಡಿಸಲು ತೊಂದರೆ ಇಲ್ಲ.

5. ದಾವಾ ಸ್ವತ್ತುಗಳನ್ನು ಎಲ್ಲರೂ ಒಟ್ಟಾಗಿ ಉಳುಮೆ ಮಾಡುತ್ತಿದ್ದೇವೆ ಎಂದು ವಾದಪತ್ರದಲ್ಲಿ ಹಾಗೂ ನನ್ನ ಮುಖ್ಯ ವಿಚಾರಣೆ ಪ್ರಮಾಣಪತ್ರದಲ್ಲಿ ಬರೆಸಿದ್ದೀರಾ ಎಂದರೆ ನನಗೆ ಗೊತ್ತಿಲ್ಲ. ದಾವಾ ಸ್ವತ್ತುಗಳನ್ನು ಎಲ್ಲರೂ ಒಟ್ಟಾಗಿ ಜಂಟಿ ಸ್ವಾಧೀನದಲ್ಲಿದ್ದು ಒಟ್ಟಾಗಿ ಉಳುಮೆ ಮಾಡುತ್ತಿದ್ದೇವೆ ಎಂದು ತೋರಿಸಲು ದಾಖಲೆ ಹಾಜರು ಪಡಿಸಿಲ್ಲ. ಪ್ರತಿವಾದಿಗಳನ್ನು ಯಾವ ದಿನಾಂಕದಂದು ಭಾಗ ಕೊಡಿ ಎಂದು ಕೇಳಿದೆವು ಎಂದು ವಾದಪತ್ರದಲ್ಲಿ, ಮುಖ್ಯ ವಿಚಾರಣೆ ಪ್ರಮಾಣಪತ್ರದಲ್ಲಿ ಬರೆಸಿಲ್ಲ. ದಾವಾ ಸ್ವತ್ತುಗಳ ಜಂಟಿ ಸ್ವಾಧೀನದಲ್ಲಿ

ನಿಮ್ಮ ಪತಿ ಇಲ್ಲದ ಕಾರಣ ಈ ದಾವೆ ಸಲ್ಲಿಸಲು ಅವರಿಗೆ ಹಕ್ಕಿರಲಿಲ್ಲ ಎಂದರೆ ಸಾಕ್ಷಿಯು ನಾವು ಅಷ್ಟು ಇಷ್ಟು ಹಣ ಕೊಡುತ್ತಿದ್ದೆವು, ಅವರೇ ಉಳುಮೆ ಮಾಡುತ್ತಿದ್ದರು ಎಂದು ನುಡಿಯುತ್ತಾರೆ. ಈ ವಿಚಾರವನ್ನು ವಾದಪತ್ರದಲ್ಲಿ ಬರೆಸಿಲ್ಲ.

6. 1ನೇ ಪ್ರತಿವಾದಿ ಬರೆದುಕೊಟ್ಟಿರುವ ಕ್ರಯಪತ್ರ ಮತ್ತು ದಾನಪತ್ರಗಳನ್ನು ಈ ದಾವೆಯಲ್ಲಿ ಪ್ರಶ್ನಿಸಿದ್ದೇವೆ. ನಾವು ದಾವೆಯಲ್ಲಿ ಪ್ರಶ್ನಿಸಿಲ್ಲ, ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಪತಿ 4 ವರ್ಷ ವಯಸ್ಸಿನಲ್ಲಿದ್ದಾಗಲೇ ಅವರನ್ನು ಅವರ ತಾಯಿ ಹಾಲಪ್ಪನಹಳ್ಳಿ, ಕೊರಟಗೆರೆ ತಾಲ್ಲೂಕು ವೆಂಕಟಪ್ಪ ಎಂಬುವವರಿಗೆ ದತ್ತು ಕೊಟ್ಟಿದ್ದು ಅಂದಿನಿಂದಲೂ ನನ್ನ ಪತಿ ಹಾಲಪ್ಪನಹಳ್ಳಿಯಲ್ಲೇ ವಾಸ ಎಂದರೆ ಸರಿಯಲ್ಲ. ದಾವಾ ಐಟಂ ನಂ.1 ರಿಂದ 3 1ನೇ ಪ್ರತಿವಾದಿಯ ಸ್ವಯಾರ್ಜಿತ ಆಸ್ತಿಗಳು ಎಂದರೆ ಸರಿಯಲ್ಲ. ಸಾಕ್ಷಿಯು ಸ್ವಇಚ್ಚೆಯಿಂದ ಆಸ್ತಿಗಳು ಮುದ್ದಮ್ಮನ ಪತಿಯ ತಂದೆಯ ಆಸ್ತಿಗಳು ಎಂದು ನುಡಿಯುತ್ತಾರೆ. ದಾವಾ ಸ್ವತ್ತುಗಳು ಮುದ್ದಮ್ಮನ ಮಾವನ ಆಸ್ತಿಗಳು ಎಂದು ತೋರಿಸಲು ದಾಖಲೆ ಹಾಜರುಪಡಿಸಿದ್ದೇನೆ. ದಾವಾ ಐಟಂ ನಂ. 1 ರಿಂದ 3ನ್ನು 1ನೇ ಪ್ರತಿವಾದಿ 2019ರಲ್ಲಿ 3ನೇ ಪ್ರತಿವಾದಿಗೆ ದಾನ ಮಾಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ದಾವಾ ಸ್ವತ್ತುಗಳ ಖಾತೆ ಮುದ್ದಮ್ಮನ ಹೆಸರಿನಲ್ಲಿದೆ.

7. ಈ ದಾವೆಯ ಬಗ್ಗೆ ನನ್ನ ಪತಿಗೆ ಏನೂ ಗೊತ್ತಿಲ್ಲ, ನನ್ನ ಚಿತಾವಣೆಯ ಮೇರೆಗೆ ಈ ಕೇಸು ಹಾಕಿರುವುದು ಎಂದರೆ ಸರಿಯಲ್ಲ. ದಾವಾ ಐಟಂ ನಂ.1 ರಿಂದ 3 1ನೇ ಪ್ರತಿವಾದಿಯ ಸ್ವಯಾರ್ಜಿತ

ಆಸ್ತಿಗಳಾಗಿದ್ದು, ವಾದಿಗೆ ಯಾವುದೇ ಭಾಗದ ಹಕ್ಕಿಲ್ಲ ಎಂದರೆ ಸರಿಯಲ್ಲ. ನನ್ನ ಪತಿ ಹಾಲಪ್ಪನಹಳ್ಳಿಯ ವೆಂಕಟಪ್ಪನವರಿಗೆ ದತ್ತು ಪುತ್ರನಾಗಿ ಹೋಗಿದ್ದು, ನನ್ನ ಪತಿಗೆ ಯಾವುದೇ ಭಾಗದ ಹಕ್ಕು ದಾವಾ ಸ್ವತ್ತುಗಳಲ್ಲಿ ಇಲ್ಲ ಎಂದರೆ ಸರಿಯಲ್ಲ. ದಾವಾ ಸ್ವತ್ತುಗಳಲ್ಲಿ ನನ್ನ ಪತಿಗೆ ಯಾವುದೇ ಭಾಗ ಇಲ್ಲದಿದ್ದರೂ ಸಹ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

5 ಮತ್ತು 6 ನೇ ಪ್ರತಿವಾದಿಗಳ ಪರವಾಗಿ ಪಾಟೀ ಸವಾಲನ್ನು ಮುಂದೂಡಲಾಯಿತು.

(ಸಾಕ್ಷಿಯು ಕೊಟ್ಟ ಸಾಕ್ಷ್ಯವನ್ನು ಬಹಿರಂಗ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಗಣಕೀಕರಿಸಿದೆ)

(ಸಾಕ್ಷಿಗೆ ಸಾಕ್ಷ್ಯವನ್ನು ಓದಿ ಹೇಳಲಾಗಿ ಕೇಳಿ ಸರಿ ಇದೆ ಎಂದು ಒಪ್ಪಿದ್ದಾರೆ)

**(ಲೋಕೇಶ)**
ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು,
ರಾಮನಗರ.